ಅ) ಪುತ್ತೂರು ನಗರಕ್ಕೆ ನಿಗದಿಪಡಿಸಿರುವ 2ನೇ ಹಂತದ ಕುಡಿಯುವ ನೀರಿನ ಯೋಜನೆ ಈಗ ಯಾವ ಹಂತದಲ್ಲಿದೆ ಸದರಿ ಕಾಮಗಾರಿಗಳನ್ನು ಯಾವ ವರ್ಷದಿಂದ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಪುತ್ತೂರು ಪುರಸಭಾ ವ್ಯಾಪ್ತಿಗೆ ಮಾತ್ರ ಕುಡಿಯುವ ನೀರಿನ ಸೌಲಭ್ಯ ಸೀಮಿತಗೊಳಿಸಿದ್ದು, ಕೆಲವೊಂದು ಪ್ರದೇಶಗಳಲ್ಲಿ ನೀರಿನ ತೊಂದರೆಯನ್ನು ನಿವಾರಿಸಲು ಸರ್ಕಾರವು ತನ್ನ ಆದೇಶ ಸಂಖ್ಯೆ : ಹೆಚ್‌ಯುಡಿ 7 ಯುಡಬ್ಲೂಎಸ್95, ದಿನಾಂಕ : 20-6-95ರಲ್ಲಿ ಅಭಿವೃದ್ಧಿ ಯೋಜನೆಯನ್ನು 41.00 ಲಕ್ಷ ರೂ.ಗಳಿಗೆ ಅನುಮೋದನೆ ನೀಡಿದೆ. ಈ ಯೋಜನೆಯಡಿಯಲ್ಲಿ ಎಲ್ಲಾ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಶೇಕಡಾ 60ರಷ್ಟು ಪೂರ್ಣಗೊಳಿಸಲಾಗಿದೆ.

ಆ) ಈ ಪಟ್ಟಣಕ್ಕೆ ಕುಮಾರಧಾರ ನದಿಯನ್ನು ಮೂಲವಾಗಿಟ್ಟುಕೊಂಡು ವೀರಮಂಲದಲ್ಲಿ ಮೂಲಸ್ಥಾವರವನ್ನು ಪ್ರಸ್ತಾವನೆ ಮಾಡಿ ಯೋಜನೆಯನ್ನು ತಯಾರಿಸಲು 6 ಕೋಟಿ ರೂ.ಗಳಾಗಬಹುದೆಂದು ಅಂದಾಜು ಮಾಡಲಾಗಿತ್ತು. ಆದರೆ ಈ ಯೋಜನೆಗೆ ಹಾಕುವ ಕೊಳವೆ ಮಾರ್ಗಕ್ಕೆ ಜಲ ಶುದ್ದೀಕರಣಾಗಾರಕ್ಕೆ ಹಾಗೂ ಇತರೆ ಕೆಲಸಗಳಿಗೆ ಭೂಸ್ವಾಧೀನ ಮಾಡಬೇಕಾಗುವುದೆಂದು ಹಾಗೂ ವಿದ್ಯುತ್‌ನ್ನು ಸರಬರಾಜು ಮಾಡಲು ಲೈನನ್ನು ಹೊಸದಾಗಿ ಈ ಸ್ಥಳಕ್ಕೆ ಹಾಕಬೇಕಾಗುವುದರಿಂದ ಈ ಯೋಜನೆಯು ಆರ್ಥಿಕವಾಗಿ ಸೂಕ್ತವಲ್ಲವೆಂದು ಅಭಿಪ್ರಾಯ ಪಡಲಾಗಿದೆ.

ವಿಷಯ : ಕುಂಬ್ರಿ ಮರಾಠಿ ಜನಾಂಗವನ್ನು ಗಿರಿಜನ ಪಂಗಡಕ್ಕೆ ಸೇರಿಸುವುದರ ಬಗ್ಗೆ

1471 (1972)-ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಹಾಗೂ ಹೊನ್ನಾವರ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಕುಂಬ್ರಿ ಮರಾಠಿ ಜನಾಂಗವನ್ನು ಗಿರಿಜನ ಪಂಗಡಕ್ಕೆ ಇದುವರೆಗೂ ಸೇರಿಸಿಲ್ಲದಿರಲು ಕಾರಣವೇನು?

ಆ) ಅತೀ ಹಿಂದುಳಿದ ಗುಡ್ಡಗಾಡು ವಾಸಿಗಳಾದ ಅವರನ್ನು ಗಿರಿಜನ ಪಂಗಡಕ್ಕೆ ಸೇರಿಸಲು ಸರ್ಕಾರ ಗಮನ ಹರಿಸಿದೆಯೇ?

ಇ) ಹಾಗಿದ್ದಲ್ಲಿ ಎಂದು ಸದರಿ ಆದೇಶ ಜಾರಿಗೊಳಿಸಲಾಗುವುದು?

ಶ್ರೀ ಕೆ. ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) ಕುಂಬ್ರಿ ಮರಾಠಿ ಜನಾಂಗವನ್ನು ಗಿರಿಜನ ಪಂಗಡಕ್ಕೆ ಸೇರಿಸಲು ಕೋರಿ ಮನವಿ ಬಂದಿರುವುದಿಲ್ಲ.

ಆ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಕೆಲವೊಂದು ಜಾತಿಗಳನ್ನು ಸೇರಿಸುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಆದೇಶ ಸಂಖ್ಯೆ : ಸಕಕಾ126 ಎಸ್‌ಎಡಿ 88, ದಿನಾಂಕ : 5-1-91ರಲ್ಲಿ ಒಂದು ಸಮಿತಿ ರಚಿಸಲಾಗಿದ್ದು ಈ ಸಮಿತಿಯನ್ನು ಪುನರ್ ರಚಿಸಲು ಉದ್ದೇಶಿಸಿದೆ. ಕುಂಬ್ರಿ ಜನಾಂಗದವರಿಂದ ಮನವಿ ಬಂದಲ್ಲಿ ಸದರಿ ಪುನರಚಿತ ಸಮಿತಿಯ ಮುಂದೆ ಮಂಡಿಸಲಾಗುವುದು

ಇ) ಉದ್ಭವಿಸುವುದಿಲ್ಲ

ವಿಷಯ : ರಾಜ್ಯದಲ್ಲಿರುವ ವಿದ್ಯಾರ್ಥಿನಿಲಯಗಳ ಕುರಿತು

1472 (2010)-ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಸರ್ಕಾರವು 95 ಮತ್ತು 96ನೇ ಸಾಲಿನಲ್ಲಿ ಪ.ಜಾತಿ : ಪ. ವರ್ಗದ ಹೆಂಗಸರ ಮತ್ತು ಗಂಡಸರಿಗಾಗಿಪ್ರಾರಂಭಿಸಲಾದ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಆ) ಸರ್ಕಾರವು 1997-98ನೇ ಆರ್ಥಿಕ ಸಾಲಿನಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಅಂದಾಜು ಮಾಡಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಸರ್ಕಾರವು ಸಮಾಡ ಕಲ್ಯಾಣ ಇಲಾಖಾವತಿಯಿಂದ 1995 ಮತ್ತು 1996ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಬಾಲಕ ಬಾಲಕಿಯರಿಗಾಗಿ ಕೆಳಕಂಡಂತೆ ಒಟ್ಟಾರೆ 209 ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದೆ.